144ನೇ ಅಧಿವೇಶನ
ನಿಯಮ-72
ಕ್ರಮಸಂಖ್ಯೆ-127

ವಿಧಾನ ಪರಿಷತ್ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಹೇಳಿಕೆ.

---o---

## ವಿಷಯ

ಕರ್ನಾಟಕ ಸರ್ಕಾರವು, ಕೆ.ಐ.ಎ.ಡಿ.ಬಿ. ಸಂಸ್ಥೆ ಮೂಲಕ ರಾಜ್ಯಾದ್ಯಂತ ಸಾವಿರಾರು ಎಕರೆ ಪ್ರದೇಶಗಳನ್ನು ರೈತರನ್ನು ಒಕ್ಕಲೆಬ್ಬಿಸಿ, ಕೈಗಾರಿಕಾ ಪ್ರದೇಶ ಸ್ಥಾಪನೆಗೆ ಭೂಸ್ವಾಧೀನ ಮಾಡಿಕೊಂಡಿರುತ್ತದೆ. ವಾಸ್ತವವಾಗಿ, ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿ, ಅಗತ್ಯವಿರುವ ನಿಜ ಉದ್ದಿಮೆದಾರರಿಗೆ ಹಂಚಿಕೆ ಮಾಡಿ, ಕೈಗಾರಿಕೆಗೆ ಉತ್ತೇಜನ ನೀಡಿ, ಉದ್ಯೋಗ ಸೃಷ್ಟಿಗೆ ಹಾಗೂ ಆರ್ಥಿಕ ಅಭಿವೃದ್ಧಿಗೆ ಅವಕಾಶ ಕಲ್ಪಿಸಬೇಕಾಗಿರುತ್ತದೆ. ಆದರೆ ಕೆ.ಐ.ಎ.ಡಿ.ಬಿ. ಸಂಸ್ಥೆ ಮತ್ತು ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಗಳು, ಸಂಸ್ಥೆಯ ಕಾಯ್ದೆಗಳಲ್ಲಿನ ನಿಯಮಗಳನ್ನು ಪಾಲಿಸದೆ ಬೇಕಾಬಿಟ್ಟಿಯಾಗಿ, ಕೆಲವು ನಿರ್ಧಿಷ್ಟ ಸಂಸ್ಥೆಗಳಿಗೆ ಹಾಗೂ ರಿಯಲ್ ಎಸ್ಟೇಟ್ ಸಂಸ್ಥೆಗಳಿಗೆ ಕೈಗಾರಿಕೆ ಹೆಸರಿನಲ್ಲಿ ದುರ್ಲಾಭ ಮಾಡಿಕೊಳ್ಳಲು ಭೂಮಿ ಹಂಚಿಕೆ ಮಾಡುತ್ತಾ ಬಂದಿರುತ್ತಾರೆ. ಇದರಿಂದಾಗಿ ಕಾಯ್ದೆಯ ಉದ್ದೇಶ ವಿಫಲವಾಗಿರುತ್ತದೆ ಹಾಗೂ ಲಕ್ಷಾಂತರ ಎಕರೆ ಭೂಮಿಯಲ್ಲಿ ಬೆಳೆಗಳನ್ನು ಬೆಳೆಯದೆ ರೈತರಿಗೆ ಹಾಗೂ ರಾಜ್ಯಕ್ಕೆ ಕೋಟ್ಯಾಂತರ ರೂಪಾಯಿಗಳ ಆರ್ಥಿಕ ನಷ್ಟ ಉಂಟಾಗಿರುತ್ತದೆ. ನಿಜವಾದ ಉದ್ದಿಮೆದಾರರ ಅರ್ಜಿಗಳನ್ನು ಪರಿಗಣಿಸುತ್ತಿಲ್ಲ. ಈ ಬಗ್ಗೆ ಮಾನ್ಯ ಉಚ್ಛನ್ಯಾಯಾಲಯದ ಅನೇಕ ತೀರ್ಮಗಳಿದ್ದರೂ ಅದಕ್ಕೆ ಮಾನ್ಯತೆ ನೀಡುತ್ತಿಲ್ಲ. ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯು ಭ್ರಷ್ಟಾಚಾರದ ಕೂಪವಾಗಿದೆ. ಇದರಿಂದಾಗಿ ಉದ್ದಿಮೆದಾರರಿಗೆ, ರಾಜ್ಯ ರೈತರಿಗೆ ಹಾಗೂ ನಿರುದ್ಯೋಗಿಗಳಿಗೆ ನಷ್ಟ ಉಂಟಾಗುತ್ತಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರ ಗಮನ ಸೆಳೆಯ ಬಯಸುತ್ತೇನೆ.

## ಉತ್ತರ

ರಾಜ್ಯದಲ್ಲಿ ಬಂಡವಾಳ ಹೂಡಿಕೆ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲು ಕರ್ನಾಟಕ ಕೈಗಾರಿಕೆಗಳ ಅಧಿನಿಯಮ (ಸೌಲಭ್ಯ), 2002 ಹಾಗೂ ಕರ್ನಾಟಕ ಕೈಗಾರಿಕೆಗಳ ಅಧಿನಿಯಮ (ತಿದ್ದುಪಡಿ) (ಸೌಲಭ್ಯ), 2015ರ ಪ್ರಕಾರ ಬಂಡವಾಳ ಗಾತ್ರದ ಆಧಾರದ ಮೇಲೆ 3 ಸಮಿತಿಗಳನ್ನು ರಚಿಸಲಾಗಿದೆ.

1) ಜಿಲ್ಲಾ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ (DLSWCC): ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿನ DLSWCC ಸಭೆಯಲ್ಲಿ ರೂ.15.00 ಕೋಟಿವರೆಗಿನ ಬಂಡವಾಳ ಹೂಡಿಕೆ ಪ್ರಸ್ತಾವನೆಗಳಿಗೆ ಅನುಮೋದನೆಯನ್ನು ನೀಡಲಾಗುತ್ತದೆ.

2) <u>ರಾಜ್ಯ ಮಟ್ಟದ ಏಕಗವಾಕ್ಷಿ ಒಪ್ಪಿಗೆ ನೀಡಿಕೆ ಸಮಿತಿ (SLSWCC)</u>: ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಅಧ್ಯಕ್ಷತೆಯಲ್ಲಿನ SLSWCC ಸಭೆಯಲ್ಲಿ ರೂ.15.00 ಕೋಟಿಯಿಂದ ರೂ.500.00 ಕೋಟಿವರೆಗಿನ ಬಂಡವಾಳ ಹೂಡಿಕೆ ಪ್ರಸ್ತಾವನೆಗಳಿಗೆ ಅನುಮೋದನೆಯನ್ನು ನೀಡಲಾಗುತ್ತದೆ.

3) <u>ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ (SHLCC)</u>: ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿನ SHLCC ಸಭೆಯಲ್ಲಿ ರೂ.500.00 ಕೋಟಿಗೂ ಮೇಲ್ಪಟ್ಟ ಬಂಡವಾಳ ಹೂಡಿಕೆ ಪ್ರಸ್ತಾವನೆಗಳಿಗೆ ಅನುಮೋದನೆಯನ್ನು ನೀಡಲಾಗುತ್ತದೆ.

ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯು SLSWCC ಹಾಗೂ SHLCC ಸಮಿತಿಗಳಿಗೆ ಸಚಿವಾಲಯ ಸೇವೆ (Secretarial Service) ಒದಗಿಸುವ ಕಾರ್ಯ ನಿರ್ವಹಿಸುತ್ತದೆ.

ಬಂಡವಾಳ ಹೂಡಿಕೆ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಆನ್‌ಲೈನ್‌ಗೆ ಅಳವಡಿಸಲಾಗಿದ್ದು, ebiz.karnataka.gov.in ತಂತ್ರಾಂಶದಲ್ಲಿ ಬಂಡವಾಳ ಹೂಡಿಕೆ ಪ್ರಸ್ತಾವನೆ ಸ್ವೀಕೃತಿಯ ನಂತರ ಎಲ್ಲಾ ಪ್ರಕ್ರಿಯೆ ಆನ್‌ಲೈನ್ ಮೂಲಕವೇ ನಡೆಯುತ್ತದೆ ಹಾಗೂ ಪ್ರಸ್ತಾವನೆಗೆ ಅನುಮೋದನೆ ನೀಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ ಎಂಬುದನ್ನು ಅರ್ಜಿದಾರರು ಖುದ್ದಾಗಿ ಪರಿಶೀಲಿಸಬಹುದು.

ತಂತ್ರಾಂಶದಲ್ಲಿ ಬಂಡವಾಳ ಹೂಡಿಕೆ ಪ್ರಸ್ತಾವನೆ ಸ್ವೀಕರಿಸಿದ ಪ್ರತಿಯೊಂದು ಪ್ರಸ್ತಾವನೆಗಳಿಗೆ ಒಬ್ಬ ನೋಡಲ್ ಅಧಿಕಾರಿಯನ್ನು ನೇಮಿಸಲಾಗುತ್ತದೆ. ಸದರಿಯವರು ಆನ್‌ಲೈನ್‌ನಲ್ಲಿ ಪ್ರಸ್ತಾವನೆಯನ್ನು ಪರಿಶೀಲಿಸಿ ಯೋಜನೆಯ ಹಾಗೂ ಪ್ರವರ್ತಕರ ವಿವರ, ಯೋಜನೆಗೆ ಅಗತ್ಯವಿರುವ ಮೂಲ ಸವಲತ್ತು ಹಾಗೂ ಅನುಮೋದನೆಗಳ ವಿವರ ಒಳಗೊಂಡ ಎಕ್ಸಿಕ್ಯೂಟೀವ್ ಸಮ್ಮರಿಯನ್ನು ಆನ್‌ಲೈನ್‌ನಲ್ಲಿ ತಯಾರಿಸಿ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಭೂ ಪರಿಶೋಧನಾ ಸಮಿತಿಯ (Land Audit Committee) ಮುಂದೆ ಮಂಡಿಸಲಾಗುತ್ತದೆ.

ಜಮೀನು ಪರಿಶೀಲನಾ ಸಮಿತಿಯು (Land Audit Committee) ಯೋಜನೆಗಳ ಪ್ರವರ್ತಕರನ್ನು ವೀಡಿಯೋ ಕಾನ್ಫರೆನ್ಸ್ / ಭೌತಿಕವಾಗಿ ಸಂದರ್ಶಿಸಿ, ಜಮೀನಿನ ಅವಶ್ಯಕತೆ ಹಾಗೂ ಇತರೆ ಅಂಶಗಳ ಬಗ್ಗೆ ವಿವರ ಪಡೆದು ಕೈಗೊಳ್ಳುವ ತೀರ್ಮಾನದ ನಂತರ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ

ಸಂಬಂಧ ಬಂಡವಾಳ ಹೂಡಿಕೆ ಗಾತ್ರದ ಆಧಾರದ ಮೇಲೆ SLSWCC/ SHLCC ಸಭೆಗಳ ಮುಂದೆ ಮಂಡಿಸಲಾಗುತ್ತದೆ.

SLSWCC ಹಾಗೂ SHLCC ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿ ನಡವಳಿಗಳು ಅನುಮೋದನೆಗೊಂಡ ತಕ್ಷಣ ಸದರಿ ನಡವಳಿಗಳನ್ನು ಹಾಗೂ ರೂ.100 ಕೋಟಿ ಒಳಗಿನ ಬಂಡವಾಳ ಹೂಡಿಕೆ ಪ್ರಸ್ತಾವನೆಗಳಿಗೆ ಸಂಬಂಧಿಸಿದಂತೆ ಯೋಜನೆ ಅನುಮೋದನೆಯ ಕಛೇರಿ ಆದೇಶಗಳನ್ನು ಕೈಗಾರಿಕಾಭಿವೃದ್ಧಿ ಆಯುಕ್ತರಿಂದ ಮತ್ತು ರೂ.100 ಕೋಟಿಗಿಂತ ಹೆಚ್ಚಿನ ಬಂಡವಾಳ ಪ್ರಸ್ತಾವನೆಗಳಿಗೆ ಸರ್ಕಾರದ ಮಟ್ಟದಲ್ಲಿ ಅಧಿಸೂಚನೆ ಹೊರಡಿಸಿ, ನಡವಳಿಗಳು, ಅಧಿಸೂಚನೆ ಹಾಗೂ ಸರ್ಕಾರಿ ಆದೇಶಗಳನ್ನು ಆಯಾ ಸಂಸ್ಥೆಗಳ ಆನ್‌ಲೈನ್ ಕಡತದಲ್ಲಿ ebiz.karnataka.gov.in ನಲ್ಲಿ ಅಪ್ಲೋಡ್ ಮಾಡಲಾಗುತ್ತದೆ.

ಹೀಗಾಗಿ, ಬಂಡವಾಳ ಹೂಡಿಕೆದಾರರು ಅನುಮೋದನೆ ಕೋರಿ ಪ್ರಸ್ತಾವನೆಗಳನ್ನು ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯ ತಂತ್ರಾಂಶ ebiz.karnataka.gov.in ನಲ್ಲಿ ಸಲ್ಲಿಸಿದ ನಂತರ ಯೋಜನೆಯ ಅನುಮೋದನೆಗೆ ಸಂಬಂಧಿಸಿದ ಎಲ್ಲಾ ಪ್ರಕ್ರಿಯೆ ಆನ್‌ಲೈನ್ ಮೂಲಕವೇ ನಡೆದು ಸರ್ಕಾರಿ ಅಧಿಸೂಚನೆ ಆದೇಶವನ್ನು/ಆನ್‌ಲೈನ್‌ನಲ್ಲಿ ಡೌನಲೋಡ್ ಮಾಡಿಕೊಳ್ಳುವುದರಿಂದ ಬಂಡವಾಳ ಹೂಡಿಕೆದಾರರ ಜೊತೆ ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯು ಯಾವುದೇ ರೀತಿಯಲ್ಲಿ ಭೌತಿಕ ಸಂಪರ್ಕಕ್ಕೆ ಬರುವುದಿಲ್ಲ ಹಾಗೂ ಸಂಸ್ಥೆಯ ಕಾರ್ಯವೈಖರಿ ಪಾರದರ್ಶಕವಾಗಿರುತ್ತದೆ.

ಭಾರತ ಸರ್ಕಾರದ Department for Promotion of Industry and Internal Trade ಇಲಾಖೆಯ ಅಂಗ ಸಂಸ್ಥೆಯಾದ ಇನ್‌ವೆಸ್ಟ ಇಂಡಿಯಾ ಸಂಸ್ಥೆಯು ಡಿಸೆಂಬರ್ 2020ನೇ ಮಾಹೆಯಲ್ಲಿ ಬಿಡುಗಡೆ ಮಾಡಿರುವ ಎಲ್ಲಾ ರಾಜ್ಯಗಳ ಇನ್‌ವೆಸ್ಟ್ ಪ್ರಮೋಷನ್ ಏಜೆನ್ಸಿ (ಬಂಡವಾಳ ಉತ್ತೇಜನ ಸಮೀಕ್ಷಾ ಸಂಸ್ಥೆ) ಸಮೀಕ್ಷಾ ವರದಿಯಲ್ಲಿ ಕರ್ನಾಟಕ ಉದ್ಯೋಗ ಮಿತ್ರ ಸಂಸ್ಥೆಯು ಬಂಡವಾಳ ಉತ್ತೇಜನೆಗೆ ಸಂಬಂಧಿಸಿದ 8 ವಿಭಾಗಗಳ ಪೈಕಿ ಬಂಡವಾಳ ಹೂಡಿಕೆದಾರರ ಆಕರ್ಷಣೆ, ಹೂಡಿಕೆ ಯೋಜನೆಗಳಿಗೆ ಸೌಲಭ್ಯ, ಯೋಜನೆ ಜಾರಿ ಬಳಿಕ ಪೂರಕ ನೆರವು ಮತ್ತು ವೆಬ್‌ಸೈಟ್ ನಿರ್ವಹಣೆ ವಿಭಾಗಗಳಲ್ಲಿ ಶೇಕಡಾ 100ರಷ್ಟು ಅಂಕಗಳಿಸಿದೆ ಮತ್ತು ಕರೋನಾ ಲಾಕ್.ಡೌನ್.ನಿಂದ ಇಡೀ ಜಗತ್ತಿನ ಉದ್ಯಮಗಳು ಕಂಗಾಲಾಗಿರುವ ಸಂದರ್ಭದಲ್ಲೂ ಹೆಚ್ಚು ಬಂಡವಾಳ ಆಕರ್ಷಿಸುವಲ್ಲಿ ರಾಜ್ಯ ಸರ್ಕಾರ ಯಶಸ್ವಿಯಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ 1966 ಒಂದು ವಿಶೇಷ ಅಧಿನಿಯಮವಾಗಿದ್ದು, ಕೈಗಾರಿಕೆ ಹಾಗೂ ಮೂಲಸೌಲಭ್ಯಗಳನ್ನು ಒದಗಿಸುವ ಉದ್ದೇಶಕ್ಕಾಗಿ ಜಮೀನುಗಳನ್ನು ತ್ವರಿತವಾಗಿ ಸ್ವಾಧೀನಪಡಿಸಿಕೊಳ್ಳುವ ಅವಕಾಶವನ್ನು ಒಳಗೊಂಡಿರುತ್ತದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಕೈಗಾರಿಕೆಗಳ ಸ್ಥಾಪನೆಗಾಗಿ ಎಲ್ಲಾ ಮೂಲ ಸೌಲಭ್ಯಗಳನ್ನು ಒಳಗೊಂಡ ಕೈಗಾರಿಕಾ ಪ್ರದೇಶಗಳನ್ನು ರೂಪಿಸುವುದೇ ಅಲ್ಲದೆ, ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಂಸ್ಥೆಗಳು ಹಾಗೂ ವಿವಿಧ ಏಕಘಟಕ ಸಂಕೀರ್ಣಗಳು ತಮ್ಮ ಯೋಜನೆಗಳಿಗೆ ಬೇಕಾದ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳುವ ಪ್ರದೇಶದಲ್ಲಿನ ಕೈಗಾರಿಕಾ ನಿವೇಶನಗಳಿಗೆ ಇರುವ ಬೇಡಿಕೆಗಳಿಗೆ ಅನುಗುಣವಾಗಿ ಮಂಡಳಿಯ ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಕಾರ್ಯಪಾಲಕ ಅಭಿಯಂತರ ಹಾಗೂ ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರ ಸಹಯೋಗದೊಂದಿಗೆ ನಿರ್ದಿಷ್ಟ ಸ್ಥಳಗಳಲ್ಲಿ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಜಮೀನುಗಳನ್ನು ಗುರುತಿಸಿದ ನಂತರ ಮಂಡಳಿ ಸಭೆಯ ಅನುಮೋದನೆ ಪಡೆದು ಭೂಸ್ವಾಧೀನ ಪ್ರಕ್ರಿಯೆಗೆ ಸಂಬಂಧಿಸಿದಂತೆ ದಿನಾಂಕ: 18.03.2013ರಂದು ಹೊರಡಿಸಿರುವ ಸುತ್ತೋಲೆಯಲ್ಲಿನ ನಿರ್ದೇಶನದ ಅನುಸಾರ ಆಯಕಟ್ಟಿಗೆ ಧಕ್ಕೆಯುಂಟಾಗದಂತೆ ತೋಟಗಳು, ಫಲವತ್ತಾದ ಜಮೀನುಗಳು ಹಾಗೂ ವಾರ್ಷಿಕ ಎರಡು ಬೆಳೆ ಬೆಳೆಯುವ ಜಮೀನುಗಳು, ತರಿ ಜಮೀನುಗಳನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಿ ಕೆ.ಐ.ಎ.ಡಿ. ಕಾಯ್ದೆ 1966 ರಡಿ ಜಮೀನನ್ನು ಸ್ವಾಧೀನಪಡಿಸಲು ಕ್ರಮವಹಿಸಲಾಗುತ್ತಿದೆ.

ಸದರಿ ಕೈಗಾರಿಕಾ ಪ್ರದೇಶಗಳ ಭೂಸ್ವಾಧೀನ ಪ್ರಕ್ರಿಯೆಯನ್ನು ನಿಯಮಾನುಸಾರ ಪೂರ್ಣಗೊಳಿಸಿ ಜಮೀನನ್ನು ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಿದ ನಂತರ ಕರ್ನಾಟಕ ಇಂಡಸ್ಟ್ರೀಸ್ (ಫೆಸಿಲಿಟೇಷನ್) ಕಾಯ್ದೆ 2002 ರನ್ವಯ SLSWCC, SHLCC ಮತ್ತು DLSWCC ಸಭೆಗಳಲ್ಲಿ ಅನುಮೋದನೆಗೊಳ್ಳುವ ಯೋಜನೆಗಳಿಗೆ ನಿಯಮಾನುಸಾರ ಅವಶ್ಯವಿರುವ ಜಮೀನನ್ನು ಹಂಚಿಕೆ ಮಾಡುವ ಕುರಿತಂತೆ, ಸಂಬಂಧಪಟ್ಟ ಯೋಜನಾ ಪ್ರವರ್ತಕರಿಂದ ಹಂಚಿಕೆ ಮೌಲ್ಯವನ್ನು ಮಂಡಳಿಗೆ ಠೇವಣಿ ಪಡೆದು, ಜಮೀನು ಹಂಚಿಕೆ ಮಾಡಲು ಕ್ರಮವಹಿಸಲಾಗುತ್ತಿದೆ.

ಅದರಂತೆ, ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 188 ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಒಟ್ಟು 21273 ಘಟಕಗಳಿಗೆ ಒಟ್ಟು 37153.53 ಎಕರೆ ಪ್ರದೇಶವನ್ನು ಹಂಚಿಕೆ ಮಾಡಲಾಗಿದೆ. ಇದರಿಂದಾಗಿ ಭೂಸ್ವಾಧೀನಕ್ಕೆ ಒಳಪಟ್ಟ ಹಲವಾರು ಗ್ರಾಮಗಳು ಅಭಿವೃದ್ಧಿಯಾಗುವುದರೊಂದಿಗೆ ಸ್ಥಳೀಯ ಜನಜೀವನದ ಮಟ್ಟ ಕೂಡ ಉನ್ನತೀಕರಣಗೊಳ್ಳುತ್ತಿದ್ದು, ಲಕ್ಷಾಂತರ ಮಂದಿಗೆ ಉದ್ಯೋಗಾವಕಾಶವನ್ನು ಸಹ ಕಲ್ಪಿಸಲಾಗುತ್ತಿದೆ. ಇದರಿಂದಾಗಿ ಸರ್ಕಾರದ ಆರ್ಥಿಕ ಸಂಪನ್ಮೂಲ ಸಹ ವೃದ್ಧಿಯಾಗುತ್ತಿದೆ.

(ಮುರುಗೇಶ್ ಆರ್. ನಿರಾಣಿ)

ಸಂಖ್ಯೆ: ಸಿಐ 211 ಐಎಪಿ (ಇ) 2021

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು